

ವಿಜೂ, ಇನ್ನೂ ಎದ್ದಿಲ್ಲವೇನೇ?, ಆಗಲೇ ನಾಲಕ್ಕಾಯಿತು ಎಂದು ಪಿಸುಮಾತಿನಲಿ ಜಯಾ ಗಾಢನಿದ್ರೆಯಲ್ಲಿದ್ದ ವಿಜೂವನ್ನು ಅಲುಗಾಡಿಸಿದಳು.

ಆಯ್ತುಮ್ಮಾ, ಎದ್ದೇ ಎಂದು ಒಂದು ಚೂರೂ ಬೇಸರಿಸದೆ ವಿಜೂ ಎದ್ದು ಸ್ನಾನಕ್ಕೆ ಒಳನಡೆದಾಗ ಜಯಾಳ ಕಣ್ಣುಗಳು ತೇವಗೊಂಡವು. ಯಾವ ಸುಂದರ ರಾಜಕುಮಾರನ ಕನಸು ಕಾಣುತ್ತಿದ್ದಳೋ, ಮುಖದಲಿ ಮುಗ್ಧ ಮಂದಹಾಸ ತುಳುಕುತ್ತಿದ್ದ ಆ ಮುದ್ದುಮುಖ ನೋಡುತ್ತಿದ್ದರೆ ಎಬ್ಬಿಸುವ ಮನಸ್ಸೇ ಬಾರದು, ಆದರೇನು ಮಾಡುವುದು ಶಾಸ್ತ್ರಿಗಳು ಹೇಳಿದ 48 ದಿನಗಳ ಪೂಜೆ ಇನ್ನೇನು ಒಂದು ವಾರಕ್ಕೆ ಪೂರ್ಣವಾಗುತ್ತದೆ. ಕಂಕಣಬಲ ಕೂಡಿ ಬಂದಿರುವುದರಿಂದ ಈ ಸಲದ ಪೂಜೆಯ ನಂತರ ಬರುವ ಸಂಬಂಧ ಕುದುರಿಯೇ ತೀರುತ್ತದೆ ಎಂಬ ಆಶ್ವಾಸನೆ ಕೊಟ್ಟಿದ್ದಾರೆ. ಈ ಹುಡುಗಿಯದೊಂದು ಮದುವೆ ಆಗಿಬಿಟ್ಟರೆ ಉಳಿದ ಮೂರು ಹೆಣ್ಣು ಮಕ್ಕಳದು ಹೇಗೋ ಆಗಿ ಬಿಡುತ್ತದೆ ಎಂದು ನಿಟ್ಟುಸಿರು ಬಿಟ್ಟಳು. ಪಾಪದ ಹುಡುಗಿ, ಹೇಳಿದ್ದಕ್ಕೆ ಎದುರು ಮಾತನಾಡಿ ಗೊತ್ತೇ ಇಲ್ಲ, ಒಬ್ಬರ ಮನಸ್ಸಿಗೂ ನೋವುಂಟು ಮಾಡುವುದಿಲ್ಲ, ಆದರೆ ಅವಳ ಹಣೆ ಬರಹವೇ ನೆಟ್ಟಗಿಲ್ಲ, ಇಷ್ಟೊತ್ತಿಗೆ ಒಂದು ಮಗುವಿನ ತಾಯಿಯಾಗಿ ಸುಖ ಸಂಸಾರ ನಡೆಸಬೇಕಾದ ಹುಡುಗಿ ಗಾಣದೆತ್ತಿನಂತೆ ಒಳಗೂ ಹೊರಗೂ ದುಡಿಯುತ್ತಿದೆ. ಶಾಲೆಗೆ ಹೋಗಿ ದುಡಿಯುವುದಲ್ಲದೆ, ಮನೆಯಲ್ಲಿಯೂ ಮಕ್ಕಳಿಗೆ ಟ್ಯೂಷನ್ ಹೇಳಿ ಕೊಟ್ಟು ಜೊತೆಗೆ ತನಗೂ ಮನೆಗೆಲಸದಲ್ಲಿ ಕೈಜೋಡಿಸುತ್ತದೆ. ಆ ದೇವರಿಗೆ ಕಣ್ಣೇ ಇಲ್ಲ, ಇಂಥ ಹುಡುಗಿಗೆ ಒಳ್ಳೆಯ ಗಂಡು ಕೂಡಿ ಬರುತ್ತಿಲ್ಲ. ಯಾವಾಗ ಈ ಮಗುವಿನ ಕನ್ಯಾದಾನದ ಸಮಯ ಬರುವುದೋ ನಾಕಾಣೆ ಎಂದು ಹಲುಬುತ್ತಿದ್ದಳು.

ಆ ನಿಟ್ಟುಸಿರಿಗೆ ಕಾರಣವೂ ಇತ್ತು. ಅದು ವಿಜೂವಿನ ಕಪ್ಪುಬಣ್ಣ. ಬಂದ ಗಂಡುಗಳೆಲ್ಲಾ ವಿಜೂವನ್ನು ನೋಡುತ್ತಿದ್ದಂತೆ ಸಪ್ಪಗಾಗಿ ಬಿಡುತ್ತಿದ್ದರು. ಹುಡುಗಿಯ ಸೌಂದರ್ಯದ ಬಗ್ಗೆ ಏನೇನೆಲ್ಲಾ ಕಲ್ಪನೆ ಮಾಡಿಕೊಂಡು ಬಂದಿರುತ್ತಿದ್ದರೋ, ವಿಜೂವನ್ನು ನೋಡುತ್ತಿದ್ದಂತೆ ಅವರ ಕಲ್ಪನಾ ಬಲೂನು ಟುಸ್ ಎನ್ನುತ್ತಿತ್ತು. ತಾವೆಷ್ಟು ಕಪ್ಪು, ಕುರೂಪು ಇದ್ದರೂ ಚಿಂತೆ ಇಲ್ಲ, ಹುಡುಗಿ ಮಾತ್ರ ರೂಪವಂತೆಯಾಗಿರಬೇಕು ಎಂಬುದು ಪ್ರತಿಯೊಬ್ಬ ಮದುವೆಯಾಗುವ ಗಂಡಿನ ಅಭಿಲಾಷೆ ಯಾಗಿರುತ್ತಿತ್ತು. ಹುಡುಗನ ಜೊತೆ ಬಂದ ಅವನ ಸಂಬಂಧಿ ಹೆಣ್ಣುಮಕ್ಕಳು ಏನು ಸುಮ್ಮನೇ ಕೂಡುತ್ತಿರಲಿಲ್ಲ, ನಿಮ್ಮ ಉಳಿದ ಹೆಣ್ಣುಮಕ್ಕಳು ಎಲ್ಲಿದ್ದಾರೆ ಎಂದು ಕಣ್ಣಾಡಿಸುತ್ತಾ ಸೀದಾ ಒಳಗೇ ಬಂದುಬಿಡುತ್ತಿದ್ದರು. ವಿಧಿಯಿಲ್ಲದೆ ಅವರನ್ನು ಪರಿಚಯ ಮಾಡಿಸಲೇಬೇಕಾಗುತ್ತಿತ್ತು. ಉಳಿದ ಮೂರು ಹುಡುಗಿಯರನ್ನು ನೋಡುತ್ತಿದ್ದ ಹಾಗೆ ಅವರ ಕಣ್ಣುಗಳು ಅರಳುತ್ತಿದ್ದವು. ಏನೋ ನೆಪ ಮಾಡಿ ಮಾತನಾಡಿಸಿ ಮತ್ತೇನೋ ಆಲೋಚಿಸುತ್ತಾ ಹೊರಬರುತ್ತಿದ್ದರು.

ಊರಿಗೆ ಹೋಗಿ ತಿಳಿಸುತ್ತೇವೆ ಎಂದು ಹೊರಡುತ್ತಿದ್ದರು. ನಂತರ ಬ್ರೋಕರುಗಳಿಗೋ, ಸಂಬಂಧಿಗಳಿಗೋ ಎರಡನೆಯ ಹುಡುಗಿಯನ್ನು ಕೊಡುವುದಾದರೆ ಕೇಳಿ ಎಂದು ಹೇಳಿ ಕಳಿಸುತ್ತಿದ್ದರು. ಮೊದ ಮೊದಲು ವಿಜೂವಿಗೆ ಇದೆಲ್ಲಾ ಬೇಸರ ತರುತ್ತಿತ್ತು. ಆದರೆ ಸಣ್ಣವಳಿದ್ದಾಗಿನಿಂದ ತನ್ನ ಶಾಮಲ ಬಣ್ಣದ ಬಗ್ಗೆ ಶಾಲಾ ಕಾಲೇಜು, ಅಕ್ಕಪಕ್ಕದವರು, ಸಂಬಂಧಿಕರು ಆಡಿಕೊಳ್ಳುವುದನ್ನು ಕೇಳೀ, ಕೇಳೀ ಒಂದು ರೀತಿಯ ನಿರ್ಲಿಪ್ತತೆ ಬೆಳೆಸಿಕೊಂಡಿದ್ದಳು. ಯಾರ ಮಾತಿಗೂ ಕಿವಿಗೊಡದೆ ಓದುವುದರಲ್ಲೇ ಲೀನವಾಗುತ್ತಾ ತನಗಿಷ್ಟವಾದ ವಿಷಯದಲ್ಲಿ ಪದವಿ ಮಾಡಿ, ಜೊತೆಗೆ ಬಿಎಡ್ ಮಾಡಿಕೊಂಡು ಸರ್ಕಾರಿ ಶಾಲೆಯಲ್ಲಿ ಟೀಚರ್ ಆಗಿ ಒಳ್ಳೆಯ ಹೆಸರು ಪಡೆದಿದ್ದಳು.

ಅವಳ ರೂಪಕ್ಕಿಂತ ಅವಳ ಸರ್ಕಾರಿ ನೌಕರಿಯ ಬಗ್ಗೆ ಒಲವಿದ್ದ ಗಂಡುಗಳೇ ಹೆಚ್ಚಾಗಿ ಬರುತ್ತಿದ್ದರು. ಆದರೆ ಯಾವಾಗ ವಿಜೂವಿನ ತಂಗಿ ಸುಜಳೂ ಕೆಲಸಕ್ಕೆ ಹೋಗ ತೊಡಗಿದಳೋ ಆಗ ಬರುತ್ತಿದ್ದ ಗಂಡುಗಳಿಗೆ ವಿಜೂವಿಗಿಂತ ರೂಪದಲ್ಲೂ, ಸೌಂದರ್ಯದಲ್ಲೂ ಮುಂದಿದ್ದ ಸುಜಳೇ ಸೆಳೆಯುತ್ತಿದ್ದಳು.

ಬರಬರುತ್ತಾ ವಿಜೂವಿಗೆ ಬಂದವರ ಮುಂದೆ ಗೊಂಬೆಯ ಹಾಗೆ ಅಲಂಕಾರ ಮಾಡಿಕೊಂಡು ಕುಳಿತುಕೊಳ್ಳಲು ಬೇಸರವಾಗುತ್ತಿತ್ತು. ಇದರ ಜೊತೆ ಅವಳಮ್ಮ ಜಯಾ ಆ ಜ್ಯೋತಿಷಿ, ಈ ಜ್ಯೋತಿಷಿ ಅಂತಾ ಹಲವಾರು ಕಡೆ ವಿಜೂವಿನ ಶಾಸ್ತ್ರ ಕೇಳಿಸಿ, ಎಷ್ಟೋ ಪೂಜೆ, ವ್ರತಗಳನ್ನು ವಿಜೂವಿನ ಕೈಯಲ್ಲಿ ಮಾಡಿಸುತ್ತಿದ್ದಳು. ಆದರೆ ಇದ್ಯಾವುದೂ ಫಲ ಕೊಡುವುದಿಲ್ಲವೆಂದು ವಿಜೂವಿಗೆ ಖಡಾಖಂಡಿತವಾಗಿ ಗೊತ್ತಿತ್ತು. ಆದರೂ ಅವರಮ್ಮನ ಮನಸ್ಸಿನ ಸಮಾಧಾನಕ್ಕಾಗಿ ಹೇಳಿದ್ದನೆಲ್ಲಾ ಮಾಡುತ್ತಿದ್ದಳು. ಈಗೀಗ ತಂಗಿ ಸುಜಾ ಮಾತಿನಲ್ಲಿ ಮನೆಯವರ ಮೇಲೆಲ್ಲಾ ಸ್ವಲ್ಪ ಸಿಡುಕು ತೋರಿಸುತ್ತಿದ್ದಳು. ಆಗಾಗ ಫೋನಿನಲ್ಲಿ ಯಾರದೋ ಜೊತೆ ಚಾಟ್ ಮಾಡುವುದು, ನಗುವುದು, ನಾಚುವುದು ನೋಡಿ ಆಗಲೇ ವಿಜಯಾಳಿಗೆ ಅನುಮಾನ ಮೂಡಿತ್ತು. ಸ್ವಲ್ಪ ದಿನದಲ್ಲೇ ತಾನು ಇಷ್ಟಪಟ್ಟ ಹುಡುಗನ ಬಗ್ಗೆ ಮನೆಯಲ್ಲಿ ಧೈರ್ಯವಾಗಿ ಪ್ರಸ್ತಾಪಿಸಿದ್ದಳು.

ಮೊದಮೊದಲು ಜಯಾ ಬೇರೆ ಜಾತಿ ಹುಡುಗ ಬೇಡ ಎಂದು ಎಷ್ಟು ತಿಳಿಹೇಳಿದರೂ ಸುಜಾಳ ನಿರ್ಧಾರವನ್ನು ಸಡಿಸಲು ಸಾಧ್ಯವಾಗಲಿಲ್ಲ. ಜಾತಿ ಬೇರೆ ಅನ್ನೋದು ಬಿಟ್ಟರೆ ಹುಡುಗನಲ್ಲಿ ಯಾವ ದುರ್ಗುಣಗಳೂ ಕಾಣಲಿಲ್ಲ. ಜೊತೆಗೆ ಗಂಡನಿಗೆ ಈ ವಿಷಯ ದಲ್ಲಿ ಯಾವ ಆಸಕ್ತಿಯೂ ಇರಲಿಲ್ಲ. ಈ ವಿಷಯದಲ್ಲಷ್ಟೇ ಅಲ್ಲ ಬೇರೆ ಯಾವ ವಿಷಯದಲ್ಲೂ ಅವನಿಗೆ ಆಸಕ್ತಿ ಎನ್ನುವುದೇ ಇರಲಿಲ್ಲ. ಅಚ್ಚಗಿದ್ದಲ್ಲಿ ಉಂಡು ಬೆಚ್ಚಗಿದ್ದಲ್ಲಿ ಮಲಗೋ ಪ್ರಾಣಿ ಅವನು. ಯಾವ ವಿಷಯದಲ್ಲೂ ರಿಸ್ಕ್ ತೆಗೆದುಕೊಳ್ಳುವಂಥ ಧೈರ್ಯವಂಥನಲ್ಲ. ತಿಂಗಳ ರೇಷನ್ನಿನಿಂದ ಹಿಡಿದು ಪ್ರತಿಯೊಂದಕ್ಕೂ ಜಯಾಳೇ ಒದ್ದಾಡಬೇಕಿತ್ತು. ಹುಟ್ಟಿಸಿದ್ದಕ್ಕೆ ಕಾರಣನಾದವನು ಎನ್ನುವುದನ್ನು ಬಿಟ್ಟರೆ ಬೇರೆ ಯಾವ ಜವಾಬಾರಿಯನ್ನೂ ವಹಿಸಿಕೊಂಡವನಲ್ಲ. ದುಡಿಮೆಯೂ ಅಷ್ಟೆ, ಸರ್ಕಾರಿ ಕಾಲೇಜಿನಲ್ಲಿ ಸೆಕೆಂಡ್ ಡಿವಿಜನ್ ಕ್ಲರ್ಕ್ ಆಗಿ ಸೇವೆ ಸಲ್ಲಿಸುತ್ತಿದ್ದ. ಬರುವ ಸಂಬಳ ಏಳು ಜನರ ಹೊಟ್ಟೆ ಬಟ್ಟೆಗೆ ಸಾಕಾಗುತ್ತಿತ್ತು. ಗಿಂಬಳದ ಮಾತಂತೂ ದೂರ, ಜೊತೆಗೆ ಹಿರಿಯರ ಆಸ್ತಿಯೂ ಇರಲಿಲ್ಲ. ಎಲ್ಲದಕ್ಕಿಂತ ಹೆಚ್ಚಾಗಿ ಅವನ ಬೇಜವಾಬ್ದಾರಿತನ ಹಾಗೂ ನಿರ್ಲಿಪ್ತತೆ ಅವಳನ್ನು ಜರ್ಜರಿತಗೊಳಿಸಿದ್ದವು. ಆಗೋ ಕಾಲಕ್ಕೆ ಆಗುತ್ತದೆ, ಯಾಕಿಷ್ಟು ತಲೆಕೆಡಿಸಿಕೊಳ್ಳುತ್ತೀಯಾ ಎಂದು ಆರಾಮವಾಗಿ ಹೇಳಿ ಗುಟುಕಾ ಪ್ಯಾಕೆಟ್‌ನ್ನು ಫಟ್ ಫಟ್ ಅಂತಾ ಝಾಡಿಸಿ ಬಾಯಿಗೆ ಹಾಕಿಕೊಳ್ಳುತ್ತಿದ್ದರೆ ಜಯಾಳ ಮೈಯೆಲ್ಲಾ ಉರಿದು ಹೋಗುತ್ತಿತ್ತು. ಜೊತೆಗೆ ಮಗಳ ಸಂಬಳವನ್ನು ತಿಂಗಳು ತಿಂಗಳು ಎಣಿಸಿ ಖುಷಿ ಪಡುತ್ತಿದ್ದ ಅವನಿಗೆ ಮದುವೆಯ ನಂತರ ಆ ಖುಷಿ ಬೇರೆಯವರ ಪಾಲಾಗುವುದನ್ನು ಸಹಿಸದೆ ಹೀಗೆ ಮಾಡುತ್ತಿದ್ದಾನೇನೋ ಎಂಬ ಸಂದೇಹ ಜಯಾಳಿಗೆ. ಅವನನ್ನು ನೋಡುತ್ತಿದ್ದರೆ ಮಿಥಿಲೆಯ ಸೀತೆಯರು ಸಿನೆಮಾನೇ ನೆನಪಾಗುತ್ತಿತ್ತು. ಅದರಲ್ಲಿ ಕೊನೆಗೆ ಮೂರೂ ಹೆಣ್ಣು ಮಕ್ಕಳು ಮದುವೆ ಇಲ್ಲದೆ ಮನೆಯಲ್ಲಿ ಕುಳಿತ ಹಾಗೆ ತನ್ನ ಮಕ್ಕಳೂ ಕುಳಿತುಬಿಡುತ್ತಾರೇನೋ ಎನ್ನುವ ಆತಂಕ ಸದಾಕಾಲ ಕಾಡುತ್ತಿತ್ತು. ಜೊತೆಗೆ ಮಗನ ವಿದ್ಯಾಭ್ಯಾಸಕ್ಕೂ ವಿಜೂವಿನ ಸಂಬಳವೇ ಆಧಾರವಾಗಿತ್ತು ಎಂಬುದನ್ನು ಹೀಗೆಳೆಯುವಂತಿರಲಿಲ್ಲ. ಆದರೆ ವಯಸ್ಸು ಮೀರಿದ ಮಗಳನ್ನು